ಅಲ್ಲಿನ ಹಳ್ಳಿಯ ಜನರಿಗೆ ಗಾಣಿಗನ ಬಗ್ಗೆ ಎಲ್ಲಿಲ್ಲದ ಭಯವಿತ್ತು. ಅವನ ಮಾತಿಗೆ ವಿರುದ್ಧ ಮಾತನಾಡಲು ಹಳ್ಳಿಯ ಜನರಿಗೆ ಧೈರ್ಯವಿರಲಿಲ್ಲ. ಗಾಣಿಗನೇ ಹಳ್ಳಿಯ ಸರದಾರನಾಗಿದ್ದನು. ಅದೊಂದು ಮೋಸಗಾರರ ಹಳ್ಳಿಯಾಗಿತ್ತು. ಅಲ್ಲಿರುವ ಜನರು ಗೂಟವು ಕುದುರೆಗೆ ಜನ್ಮವನ್ನು ಕೊಡುತ್ತದೆಂದು ವಾದ ಮಾಡುವುದು ಸಾಮಾನ್ಯವಾಗಿತ್ತು.

ವ್ಯಾಪಾರಿಗೆ ಬೇರೆ ದಾರಿ ಕಾಣದೆ ನ್ಯಾಯಾಧೀಶರ ಮುಂದೆ ವಿಷಯವನ್ನು ತೆಗೆದುಕೊಂಡು ಹೋದನು. ಅವರಲ್ಲಿ ನೆಡೆದ ವಿಷಯಗಳನ್ನೆಲ್ಲವನ್ನೂ ಹೇಳಿ ತನಗೆ ನ್ಯಾಯ ಕೊಡಿಸಬೇಕೆಂದು ವಿನಂತಿಸಿಕೊಂಡನು. ನ್ಯಾಯಾಧೀಶರು ಎರಡೂ ಕಡೆಯ ವಾದ ವಿವಾದಗಳನ್ನು ಕೇಳಿದ ನಂತರ ಗಾಣಿಗನ ಮಾತು ಸುಳ್ಳೆಂದೂ ಹೇಳಿದರೂ ಹಳ್ಳಿಯ ಜನರ ಸಾಕ್ಷಿಯಿಂದ ಗೂಟವು ಕುದುರೆಗೆ ಜನ್ಮ ನೀಡಿರುವುದು ಸರಿಯೆಂದು ವಾದವು ನಡೆಯಿತು. ಹಳ್ಳಿಯ ಜನರು ಗೂಟವು ಕುದುರೆಗೆ ಜನ್ಮವನ್ನು ಪ್ರತಿವರ್ಷವೂ ಕೊಡುತ್ತಿರುವುದನ್ನು ನೋಡಿದ್ದೇವೆ ಎಂದಾಗ ನ್ಯಾಯಧೀಶರಿಗೆ ಸುಳ್ಳು ಸಾಕ್ಷಿಯಿಂದ ವ್ಯಾಪಾರಿಗೆ ನ್ಯಾಯ ಒದಗಿಸಲು ಸಾಧ್ಯವಾಗಲಿಲ್ಲ.

ಕೊನೆಯದಾಗಿ ನ್ಯಾಯಧೀಶರು ವ್ಯಾಪಾರಿಯಲ್ಲಿ ‘ನಿನ್ನ ಪರವಾಗಿ ಯಾರಾದರೂ ಸಾಕ್ಷಿ ಹೇಳುವವರು ಇದ್ದಾರೆಯೇ?’ ಎಂದು ಕೇಳಿದರು. ಆಗ ವ್ಯಾಪಾರಿಗೆ ನರಿಯ ಮಾತುಗಳು ನೆನಪಾಯಿತು. ಕಷ್ಟಕಾಲದಲ್ಲಿ ಸಹಾಯವನ್ನು ಮಾಡುವುದಾಗಿ ನರಿಯು ವ್ಯಾಪಾರಿಗೆ ಹೇಳಿತ್ತು. ವ್ಯಾಪಾರಿಯು ನರಿಯನ್ನು ಕಾಡಿನಿಂದ ಕರೆಯಿಸಿಕೊಂಡನು. ನರಿಯು ವ್ಯಾಪಾರಿಗೆ ಸಹಾಯ ಮಾಡಲು ಕಾಡಿನಿಂದ ಬಂದಿತು. ಆದರೆ ಅದು ನ್ಯಾಯಾಲಯಕ್ಕೆ ಬಂದು ಬಾಗಿಲ ಬಳಿಯ ಬೆಂಚಿನ ಮೇಲೆ ಮಲಗಿ ಗೊರಕೆಯನ್ನು ಹೊಡೆಯತೊಡಗಿತು.

ನ್ಯಾಯಾಧೀಶರು ಸಾಕ್ಷಿಯನ್ನು ಹೇಳಲು ನರಿಯನ್ನು ಕೂಗಿದಾಗ ನರಿಯು ಮಲಗಿತ್ತು. ಆಗ ಅಲ್ಲಿರುವ ಸೇವಕರು ನರಿಯನ್ನು ನಿದ್ದೆಯಿಂದ ಎಬ್ಬಿಸಿ ಕಟಕಟೆಯಲ್ಲಿ ನಿಲ್ಲಿಸಿದರು.

‘ನೀನು ವ್ಯಾಪಾರಿಯ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೀಯಾ ಅಥವಾ ಮಲಗಿ ನಿದ್ದೆಯನ್ನು ಮಾಡಲು ಬಂದಿದ್ದೀಯಾ?’ ಎಂದು ನ್ಯಾಯಾಧೀಶರು ನರಿಯನ್ನು ಕೇಳಿದರು.

ಆಗ ನರಿಯು ನ್ಯಾಯಾಧೀಶರಲ್ಲಿ ‘ಸ್ವಾಮಿ, ನೆನ್ನೆ ಇಡೀ ರಾತ್ರಿ ನಿದ್ದೆಯನ್ನು ಮಾಡಲಾಗಲಿಲ್ಲ. ಕಾಡಿನಲ್ಲಿ ದೊಡ್ಡ ಕೆರೆಗೆ ಬೆಂಕಿ ಬಿದ್ದಿತ್ತು. ಅದರಲ್ಲಿದ್ದ ಮೀನುಗಳು ಬೆಂದು ಹೋದವು. ಆ ಬೆಂದ ಮೀನುಗಳನ್ನು ನಾನು ಆಯ್ದುಕೊಂಡು ತಿನ್ನುತ್ತಿದ್ದೆ. ಹೀಗಾಗಿ ನಿದ್ದೆ ಬಂದು ಬಿಟ್ಟಿತು. ನನ್ನನ್ನು ಕ್ಷಮಿಸಿ’ ಎಂದಿತು.

ನರಿಯ ಮಾತುಗಳನ್ನು ಕೇಳಿ ಅಲ್ಲಿ ಸೇರಿದ್ದ ಜನರು ಗಹಗಹಿಸಿ ನಗಲು ಪ್ರಾರಂಭ ಮಾಡಿದರು.

‘ಎಲ್ಲಿಯಾದರೂ ಕೆರೆಗೆ ಬೆಂಕಿ ಬೀಳುವುದುಂಟೇ? ಇಂಥ ಸುಳ್ಳುಗಳನ್ನು ಹೇಳಲು ನಿನಗೆ ನಾಚಿಕೆಯಾಗುವುದಿಲ್ಲವೇ?’ ಎಂದು ನ್ಯಾಯಾಧೀಶರು ನರಿಗೆ ಗದರಿದರು.

ಆಗ ನರಿಯು ಅಳುಕದೆ ನ್ಯಾಯಾಧೀಶರ ಮುಂದೆ ‘ಸ್ವಾಮಿ, ಅಂಗಳದಲ್ಲಿರುವ ಗೂಟವು ಪ್ರತಿವರ್ಷವು ಕುದುರೆಯೊಂದಕ್ಕೆ ಜನ್ಮವನ್ನು ಕೊಡುವುದು ನಿಜವಾದರೆ ಕೆರೆಗೆ ಬೆಂಕಿ ಬೀಳುವುದು ಸಹ ನೀವು ನಂಬಲೇ ಬೇಕಾದ ಸಂಗತಿಯಲ್ಲವೇ?’ ಎಂದಿತು.

ನರಿಯ ಮಾತುಗಳನ್ನು ಕೇಳಿ ನ್ಯಾಯಾಧೀಶರಿಗೆ ತನ್ನ ತಪ್ಪಿನ ಅರಿವಾಯಿತು. ನ್ಯಾಯಾಧೀಶರು ಗಾಣಿಗನ ಬಳಿಯಲ್ಲಿದ್ದ ಕುದುರೆಯನ್ನು ವ್ಯಾಪಾರಿಗೆ ವಾಪಾಸು ಕೊಡಿಸಿದನು. ಸುಳ್ಳು ಸಾಕ್ಷಿಯನ್ನು ಹೇಳಿದವರಿಗೆ ಮತ್ತು ಗಾಣಿಗನಿಗೆ ಶಿಕ್ಷೆಯನ್ನು ವಿಧಿಸಿದನು.ವ್ಯಾಪಾರಿಯು ನರಿಯ ಉಪಕಾರವನ್ನು ನೆನೆಯುತ್ತಾ ಅಲ್ಲಿಂದ ತಾನು ಹೋಗಬೇಕಾದ ಸ್ಥಳಕ್ಕೆ ಹೊರಟು ಹೋದನು. ■



ಚಿತ್ರ: ವಿಜಯಕುಮಾರಿ

# ‘ಅಮ್ಮು’ ತಂದ ಚಂದ್ರನ ಮಿಂಚು

■ **ಚಂದನ ಜಿ. ಪಿ**

ಚಂದ್ರನ ಕಥೆಯ ಹೇಳಿದಳಮ್ಮ
ಕಥೆಯನು ಕೇಳುತ ಪಾಚಿದ ಅಮ್ಮು
ಸುಂದರ ಚಂದ್ರನ ಮೇಲೆ ನೋಡಿ
ಹಿಡಿಯಲು ತವಕಿಸಿ ಕೈ ಚಾಚಿದನು
ಎಗರಿದನು, ದೊಪ್ಪೆಂದು ಬಿದ್ದನು
ಬಿಡದೆ ಮತ್ತೆ ಹಾರಿದನು

ಒಮ್ಮೆಲೆ ಚಂದ್ರನ ಹಿಡಿದಂತಾಗಿ
ಪಿಳಿ ಪಿಳಿ ಕಣ್ಣನು ಬಿಟ್ಟನು ಅಮ್ಮು
ಕೈಯಲೆಲ್ಲಾ ಮಿಂಚೆ ಮಿಂಚು
ಬೆಳ್ಳಿ ಬೆಳಕಿನ ಚಂದ್ರನ ಮಿಂಚು
ಸರ ಸರ ಜೇಬಲಿ ತುರುಕಿದನು
ಜೇಬಲೂ ಹೊಳೆವ ಬೆಳಕಿನ ಮಿಂಚು

ಅಚ್ಚರಿಯಿಂದ ಕರೆದನು ಅಮ್ಮು
ಚಿನ್ನೂ ಪುಟ್ಟಿ ಮೇರಿ ಮುನ್ನ
ಬನ್ನಿರಿ ಎಲ್ಲರೂ ನನ್ನಯ ಸಂಗಡ
ಹಾರುತ ಬೀಳುತ ಚಂದ್ರನ ಮಿಂಚನು
ಹಿಡಿದು ಕೊಟ್ಟನು ಗೆಳೆಯರಿಗೆ
ಚಿನ್ನು ಮುನ್ನಾರ ಜೇಬಲು ಮಿಂಚು
ಪುಟ್ಟಿಯು ಮೇರಿಗೆ ಬಳಿದಳು ಮಿಂಚು

ಎಲ್ಲರೂ ಮಿಂಚಿನ ಹೋಳಿಯನಾಡಿ
ಮೈ ಕೈ ಎಲ್ಲಾ ಬೆಳಕಲಿ ಮಿಂಚಿ
ಎಳೆಯರು ಆಡುತಾ ಖುಷಿಯನು ಹಂಚಿ
ಬೆಳಗಾಯಿತು ಏಲು ಎನಲು ಅಮ್ಮ
ಚಂದ್ರನ ಮಿಂಚೆಲ್ಲಿ ಹೋಯಿತು ಅಮ್ಮ
ಪೆಚ್ಚುತಾ ಜೇಬಲಿ ಹುಡುಕಾಡಿದ ಅಮ್ಮು